ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).–

ಅ) ಸಂಪರ್ಕ ಮತ್ತು ಕಟ್ಟಡಗಳ ವಲಯದಿಂದ ಸಣ್ಣ ನೀರಾವರಿಯನ್ನು ದಿನಾಂಕ ೧–೪–೧೯೮೪ರಿಂದ ಪ್ರತ್ಯೇಕಿಸಲಾಯಿತು.

ಆ) ರೂ. ೧೯೮.೭೭ ಕೋಟಿ. ಸಾಕಷ್ಟು ಹಣ ಒದಗಿಸಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ರೂ. ೬೫.೯೪ ಲಕ್ಷ.

ಈ) ಇಲ್ಲ.

ಹೆಗ್ಗಡದೇವನ ಕೋಟೆ ತಾಲ್ಲೂಕು ರಸ್ತೆ ರಿಪೇರಿ ಬಗ್ಗೆ

೫೦೨. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ) — ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎಚ್.ಡಿ. ಕೋಟೆ ತಾಲ್ಲೂಕಿನ ಮಳ್ಳೂರಿನಿಂದ ಹೊಸ ಬಿರ್ಯಾಳ ವರೆಗೆ ಅಡ್ಡ ರಸ್ತೆಯನ್ನು ಹಾಗೂ ಸರಗೂರಿನಿಂದ ಮೊಳೆಯೂರಿನ ರಸ್ತೆಯ ಸಾದು ರಸ್ತೆಯಿಂದ ಜನಾಂಗಳಿಗೆ ಹಾಗೂ ವಾರಗಳಿಗೆ ಒಡಾಡಕ್ಕೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ರಸ್ತೆಗಳ ದುರಸ್ತಿಯ ಬಗ್ಗೆ ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೆ ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಸಚಿವರು).—

ಅ) ಸದರಿ ರಸ್ತೆಗಳು ಸುಸ್ಥಿತಿಯಲ್ಲಿಲ್ಲದೆ ಇರುವುದು ಗಮನಕ್ಕೆ ಬಂದಿದೆ.

ಆ) ಸದರಿ ರಸ್ತೆಗಳು ಈಗ ಮೈಸೂರು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಅವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಲೋಕೋಪಯೋಗಿ ಇಲಾಖೆಯ ಬಗ್ಗೆ

೫೦೩. ಶ್ರೀ ಆರ್. ರಾಮಯ್ಯ (ಹಿರಿಯೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬–೮೭ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ಸಚಿವರು ನೆರವೇರಿಸಿದ ಶಿಲಾ ನ್ಯಾಸಗಳ ಸಂಖ್ಯೆ ಎಷ್ಟು, ಹಾಗೂ ಅವುಗಳಿಗಾದ ಖರ್ಚೆಷ್ಟು ?

ಆ) ಸದರಿ ಕಾಮಗಾರಿಗಳು ಪ್ರಾರಂಭವಾಗದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಿರಿಯೂರು ತಾಲ್ಲೂಕು ಚಿಗಳಿ ಕಟ್ಟೆಯ ಬಳಿ ನಿರ್ಮಾಣವಾಗುತ್ತಿರುವ ಸೇತುವೆ ಕಾಮಗಾರಿಗಳು ಅರ್ಧಕ್ಕೆ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).–

ಅ)

ಶಿಲಾ ನ್ಯಾಸಗಳ ಸಂಖ್ಯೆ	ಕಟ್ಟಡ	ಸೇತುವೆಗಳು	ಸಣ್ಣ ನೀರಾವರಿ	ಒಟ್ಟು
	೧	೨೩	೧	೨೫

(ಸೇತುಬಂಧನದ ಅಡಿಯಲ್ಲಿ ೧೩)

ಖರ್ಚು ರೂ. ೧೨, ೭೯೬

ಸಣ್ಣ ನೀರಾವರಿ ಮತ್ತು ಕಟ್ಟಡ ಕಾಮಗಾರಿ ಬಿಟ್ಟು ಉಳಿದ ಎಲ್ಲಾ ಕಾಮಗಾರಿಗಳು ಚಿತ್ರದುರ್ಗ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ.

ಆ) ಸಣ್ಣ ನೀರಾವರಿ ಕೆಲಸವು ಪ್ರಗತಿಯಲ್ಲಿದೆ. ಸೇತು ಬಂಧನದಡಿಯಲ್ಲಿ ಶಿಲಾ ನ್ಯಾಸ ಮಾಡಿದ ೧೩ ಕಾಮಗಾರಿಗಳ ಪೈಕಿ ೮ ಕೆಲಸಗಳು ಪ್ರಾರಂಭವಾಗಿದ್ದು ೫ ಕಾಮಗಾರಿಗಳು ಪೂರ್ಣ ಗೊಂಡಿವೆ. ಉಳಿದ ೩ ಕೆಲಸಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ. ಉಳಿದ ೧೦ ಸೇತುವೆ ಕಾಮಗಾರಿಗಳು ೮೭-೮೮ರ ಜಿಲ್ಲಾ ಪರಿಷತ್ ಆಯವ್ಯಯದಲ್ಲಿ ಸೇರಿವೆ. ಈ ಕಾಮಗಾರಿಗಳಿಗೆ ಚಿತ್ರದುರ್ಗ ಜಿಲ್ಲಾಪರಿಷತ್ ೮೭-೮೮ನೇ ಸಾಲಿನಲ್ಲಿ ಅನುದಾನವನ್ನು ಒದಗಿಸಿ ಪ್ರಾರಂಭ ಮಾಡಲು ಕ್ರಮ ತೆಗೆದು ಕೊಳ್ಳಬೇಕು ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.

ಇ) ಮತ್ತು ಈ) ಈ ಕಾಮಗಾರಿಯನ್ನು ಇನ್ನೂ ಪ್ರಾರಂಭ ಮಾಡಿಲ್ಲ. ಈ ಕಾಮಗಾರಿಗೆ ೮ ಲಕ್ಷ ರೂ.ಗಳ ಅಂದಾಜಿಗೆ ದಿನಾಂಕ ೩೧-೩-೮೭ರಲ್ಲಿ ಸರ್ಕಾರದಿಂದ ಆಡಳಿತ ಮಂಜೂರಾತಿ ನೀಡ ಲಾಗಿದೆ. ಈ ಕಾಮಗಾರಿಯು ಚಿತ್ರದುರ್ಗ ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬರುತ್ತದೆ. ೧೯೮೭-೮೮ರ ಚಿತ್ರದುರ್ಗ ಜಿಲ್ಲಾ ಪರಿಷತ್ ಆಯವ್ಯಯದಲ್ಲಿ ಸೇರಿರುವ ಒಟ್ಟು ೪೦ ಸೇತುವೆ ಕಾಮಗಾರಿಗಳಿಗೆ ೯.೮೦ ಲಕ್ಷ ರೂ. ಒಟ್ಟು ಮೊತ್ತ (ಲಂಪ್‌ಸಮ್) ಅನುದಾನ ಒದಗಿಸಲಾಗಿದೆ. ಚಿತ್ರದುರ್ಗ ಜಿಲ್ಲಾ ಪರಿಷತ್ ನವರು ಈ ಕಾಮಗಾರಿಯನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಬೇಕು.

ನೀರಾವರಿ ಇಲಾಖೆಯಲ್ಲಿ ಕೆರೆಗಳ ಬಗ್ಗೆ ಇರುವ ಅಸಡ್ಡೆ

೪೩೬ ಶ್ರೀ ಆರ್. ರಾಮಯ್ಯ (ಹಿರಿಯೂರು).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಬೃಹತ್, ಮಧ್ಯಮ ಹಾಗೂ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು ?

ಆ) ಸಣ್ಣ ಕೆರೆಗಳ ಅಭಿವೃದ್ಧಿಗೆ ಸರ್ಕಾರದವರು ಏಕ ರೀತಿಯ ಮಾರ್ಗಸೂಚಿಯನ್ನು ತಯಾರಿ ಸಲು ಉದ್ದೇಶಿಸಿದ್ದಾರೆಯೇ ?

ಇ) ಹಾಗಿದ್ದಲ್ಲಿ, ಇದುವರೆವಿಗೂ ಪ್ರಾರಂಭವಾಗದಿರಲು ಕಾರಣಗಳೇನು ?

ಈ) ಸದರಿ ಕೆರೆಗಳಿಂದ ನೀರು ಸೌಲಭ್ಯ ಪಡೆದಿರುವ ಭೂಮಿಯ ವಿಸ್ತೀರ್ಣ ಎಷ್ಟು; ಹಾಗಿದ್ದಲ್ಲಿ ಈ ಭೂಮಿಗೆ ವಿಧಿಸಲಾಗುವ ಕಂದಾಯದ ದರವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಬೃಹತ್ ನೀರಾವರಿ ಯೋಜನೆಗಳು ಇಲ್ಲ. ಮಧ್ಯಮ ನೀರಾವರಿ ಯೋಜನೆಗಳು : ೨ ಮತ್ತು ಸಣ್ಣ ನೀರಾವರಿ ಕೆರೆಗಳು : ೩೬೨.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ೩೮,೨೩೦ ಹೆಕ್ಟೇರುಗಳು. ದಿನಾಂಕ:೨೯-೭-೧೯೮೫ರ ಸರ್ಕಾರದ ಆದೇಶದ ಸಂಖ್ಯೆ: ಆರ್‌ಡಿ ೫೬ ಸಿಡಬ್ಲ್ಯುಆರ್ ೮೩ ರಂತೆ ನೀರಿನ ಕರ ವಿಧಿಸಲಾಗುತ್ತಿದೆ.

ಅಫಜಲ್‌ಪುರ ತಾಲ್ಲೂಕಿನಲ್ಲಿ ಪ್ರೌಢ ಶಾಲೆಗಳಿಗೆ ಕಟ್ಟಡ ಅಭಾವದ ಬಗ್ಗೆ

೬೭೧ ಶ್ರೀ ಮಾಲಿಕಯ್ಯ ಗುತ್ತೇದಾರ್ (ಅಫ್ಜಲ್‌ಪುರ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅಫಜಲ್‌ಪುರ ತಾಲ್ಲೂಕಿನಲ್ಲಿ ಸ್ವಂತ ಕಟ್ಟಡವಿಲ್ಲದೆ ನಡೆಯುತ್ತಿರುವ ಪ್ರೌಢ ಶಾಲೆಗಳು ಎಷ್ಟು ?